ನನ್ನ ಓದು

# ಒದ್ದೆಗಣ್ಣುಗಳಲ್ಲಿ ಮಿನುಗುವ ಭರವಸೆಯ ಬೆಳಕು



**ಭಾರತಿ ದೇವಿ ಪಿ.**

'ನೂರು ನೋವಿನ ನೆನಪ ಹೆಣೆದು ಒಂದೇ ಪದ್ಯ ಬರೆಯುತ್ತಿದ್ದೇನೆ' – ಕವಿ ಚಾಂದ್ ಪಾಷಾ ಬರೆಯುವ ಈ ಸಾಲು ಎಷ್ಟೋ ಸಂದರ್ಭಗಳಲ್ಲಿ ನಿಜ. ಅವರ 'ಚಿತ್ರ ಚಿಗುರುವ ಹೊತ್ತು' ಮತ್ತು ಇತ್ತೀಚೆಗೆ ಹೆಚ್ಚು ಮೆಚ್ಚುಗೆ ಪಡೆದಿರುವ 'ಒದ್ದೆಗಣ್ಣಿನ ದೀಪ' ಸಂಕಲನಗಳು ಒಂದು ಇನ್ನೊಂದರ ಮುಂದುವರಿದ ಭಾಗವಾಗಿರುವ ಹಾಗೆ, ಅವೇ ಭಾವಗಳು ಬೇರೆ ಬೇರೆ ತೀವ್ರತೆಯಲ್ಲಿ ಮತ್ತು ರೂಪದಲ್ಲಿ ಅಭಿವ್ಯಕ್ತಗೊಂಡಂತೆ ಅನಿಸುತ್ತದೆ. ಹಾಗೆ ನೋಡಿದರೆ ನೋವಿನ ಕಾರಣಗಳು, ನೋವಿನ ತೀವ್ರತೆ ಬೇರೆಬೇರೆಯಾದರೂ ನೋವು ಎಲ್ಲರದೂ ಹೌದು. ಹಾಗೆಯೇ ಆ ನೋವುಗಳೆಲ್ಲವನ್ನೂ ಹೆಣೆಯುವ ಬಗೆಯೇ ಲೋಕದ ಜೊತೆಗೆ ಅನುಸಂಧಾನ ನಡೆಸಬೇಕಾದ ಬಗೆಯನ್ನು ತಿಳಿಸುತ್ತದೆ.

ಒದ್ದೆಯಾಗದೇ ಚಿಗುರುವುದು ಸಾಧ್ಯವಿಲ್ಲ, ಪರಸ್ಪರ ಬೆಸೆದುಕೊಳ್ಳುವುದೂ ಸಾಧ್ಯವಿಲ್ಲ. ತೇವದೊಳಗೆ ಸ್ನಿಗ್ಧತೆ, ಮಾರ್ದವ, ಅಳು, ಅಸಹಾಯಕತೆ, ಜೀವ ಚೈತನ್ಯ ಎಲ್ಲವೂ ಇದೆ. ಈ ಆರ್ದ್ರತೆ ಮತ್ತು ಅಸಹಾಯಕತೆಯ ನಡುವೆಯೇ ದೀಪವೊಂದು ಬೆಳಗುವ ಸಾಧ್ಯತೆ, ವೈರುಧ್ಯಗಳ ಮಧ್ಯೆ ಉಸಿರುದಾಣಗಳನ್ನು ಅರಸುವ ಜೀವನ ಪ್ರೀತಿಯಿಂದಾಗಿ ಗೋಚರವಾಗುತ್ತದೆ. ಕವಿ ಚಾಂದ್ ಪಾಷಾ ಅವರು ಈ ಒಡಕುಗಳ ಲೋಕವನ್ನು ಎದುರಾಗುವುದು ಹೀಗೆ.

ಚಾಂದ್ ಪಾಶಾ ಅವರ ಕವಿತೆಗಳು, ಲೋಕದ ತಲ್ಲಣ ಬೇರೆಯಲ್ಲ, ನನ್ನದು ಬೇರೆಯಲ್ಲ –ಎಂಬ ಅಭಿನ್ನತೆಯಲ್ಲಿ ಮಾತಿಗೆಳಸುತ್ತವೆ. ಇಲ್ಲಿ ಯೌವನದ ಕಾವು ಇದೆ. ಮೋಹಕವಾಗಿರುವಂತೆಯೇ, ತಲ್ಲಣಗೊಳಿಸುವ ಪ್ರೀತಿಯ ಲೋಕ ಇದೆ. ಜೀವಪ್ರೀತಿಗೆ ಎರವಾಗುವಂತೆ ನಮ್ಮ ಸುತ್ತಲೂ ಹೆಣೆದು ಕೊಂಡಿರುವ ವಿಷಮತೆಗಳ ಬಗ್ಗೆ ಆಕ್ರೋಶವಿದೆ. ಹಳೆಯ ರೋಗ ವಾಸಿಯಾಗುತ್ತಿಲ್ಲ ಎನ್ನುವ ವಿಷಾದವೂ ಕಾಣುತ್ತದೆ. ಜೊತೆಗೇ ಎಲ್ಲ